**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರ:811/2025**

**ಸಿ.ಡಬ್ಲ್ಯೂ:3 , ಪಿ.ಡಬ್ಲ್ಯೂ: 3**

ಸಾಕ್ಷಿದಾರರ ಹೆಸರು : ಕೃಷ್ಣ
ತಂದೆಯ ಹೆಸರು : ಅನಂತ ಮರಾಠಿ
ವಯಸ್ಸು : 38 ವರ್ಷ
ಉದ್ಯೋಗ : ಕೃಷಿ
ವಾಸ್ತವ್ಯ : ಉತ್ತರಕೊಪ್ಪ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 27/09 /2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ದಿನಾಂಕ ನೆನಪಿಲ್ಲ. ನಾನು ರಸ್ತೆಯಿಂದ ಮನೆಗೆ ಹೋಗುವಾಗ ಪೊಲೀಸರು ಸರಾಯಿ ಪ್ರಕರಣದ ವಿಚಾರಣೆಗಾಗಿ 1 ಪೊಟೋ ತೆಗೆದು ನನಗೆ ಸಹಿ ಮಾಡಲು ಹೇಳಿದ್ದರು. ನನಗೆ ಸದರಿ ಪ್ರರಕಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

2. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಸಿ ಎಂದು ಗುರುತಿಸಲಾಯಿತು. ಆದರೆ ಅದರಲ್ಲಿರುವ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲವೆಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 21.11.2023 ರಂದು ಸದರಿ ಪ್ರಕರಣದ ಆರೋಪಿಯ ಮನೆಯ ಮೇಲೆ ಅಬಕಾರಿ ದಾಳಿ ಮಾಡುವ ಕಾಲಕ್ಕೆ ನಾನು ಪಂಚನಾಗಿ ಹಾಜರಿದ್ದೇನು ಎಂದರೆ ಸರಿಯಲ್ಲ. ಸದರಿ ಆರೋಪಿ ಮನೆಯಲ್ಲಿ 20 ಲೀ ಸಾಮರ್ಥ್ಯದ ಬಿಳಿ ಪ್ಲಾಸ್ಟೀಕ್ ಕ್ಯಾನಿನಲ್ಲಿ ಬೆಲ್ಲದ ಕೊಳೆಯನ್ನು ಜಪ್ತು ಮಾಡಿದ್ದರು ಎಂದರೆ ಸರಿಯಲ್ಲ. ಮನೆ ಹಿಂಬದಿಯ ಬಾಳೆ ತೋಟದಲ್ಲಿ 2 ಬಿಳಿಯ ಪ್ಲಾಸ್ಟೀಕ್ ಕ್ಯಾನನ್ನು ನೆಲದಲ್ಲಿ ಹೊಂಡ ತೆಗೆದಿದ್ದು ಹುತಿಟ್ಟಿದ್ದು ಅದನ್ನು ಹೊರ ತೆಗೆದು ಬಿಳಿಯ 30 ಲೀ ನ

ಪ್ಲಾಸ್ಟೀಕ್ ಕ್ಯಾನಿನಲ್ಲಿ 30 ಲೀ ಸರಾಯಿ ಪತ್ತೆಯಾಗಿತ್ತು ಎಂದರೆ ಸರಿಯಲ್ಲ. ಪತ್ತೆಯಾದ ಕ್ಯಾನುಗಳಿಂದ ರಾಸಾಯನಿಕ ಪರೀಕ್ಷೆಗೆ 500 ಎಮ್ ಎಲ್ ನ 2 ಬಿಳಿಯ ಪ್ಲಾಸ್ಟೀಕ್ ಬಾಟಲಿಯಲ್ಲಿ ತಲಾ 500 ಎಮ್ ಎಲ್ ನಂತೆ ಕಳ್ಳಬಟ್ಟಿ ಸರಾಯಿ ತುಂಬಿ ಬಿಳಿ ದಾರದಿಂದ ಕಟ್ಟಿ ಇಲಾಖಾ ಸೀಲು ಮಾಡಿ ಅದಕ್ಕೂ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 25 ಲೀ ಕಳ್ಳಬಟ್ಟಿ ಇರುವ 1 ಪ್ಲಾಸ್ಟೀಕ್ ಕ್ಯಾನ್ ಹಾಗೂ ಒಂದು ಖಾಲಿ ಕ್ಯಾನ್ , 2 ಅಲ್ಯೂಮಿನಿಯಂ ಪಾತ್ರೆ , 20 ಲೀ ಬೆಲ್ಲದ ಕೊಳೆ ತುಂಬಿದ್ದ ಕ್ಯಾನು ಜಪ್ತು ಮಾಡಿದ್ದು ಅದರ ಮೌಲ್ಯ ರೂ. 6350 ಆಗಿತ್ತು ಎಂದರೆ ಸರಿಯಲ್ಲ.ಸದರಿ ಶೊಧನಾ ಕಾಲಕ್ಕೆ ತಯಾರಿಸಿದ ಪಂಚನಾಿಮೆಯನ್ನು ಬೆಳಿಗ್ಗೆ 8.30 ರಿಂದ 9.15 ಗಂಟೆಯವರೆಗೆ ಸ್ಥಳದಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ**